ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ದಿನಾಂಕ ೩ನೇ ಮಾರ್ಚಿ ೧೯೮೬. ಫಾಲ್ಗುಣ ೧೨, ೧೯೦೭. ಶಕ

ವಿಧಾನಸೌಧದಲ್ಲಿರುವ, ವಿಧಾನ ಸಭೆಯ ಸಭಾಂಗಣದಲ್ಲಿ

ಸದನವು ಬೆಳಿಗ್ಗೆ ಹತ್ತು ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದ್ದರು.]

ಸಂತಾಪ ಸೂಚಕ ನಿರ್ಣಯ.

ಅಧ್ಯಕ್ಷರು.—ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಎಚ್. ಎಸ್. ಸೂರ್ ನಾರಾಯಣರಾವ್‌ರವರು ದಿನಾಂಕ ೧೭ನೇ ಫೆಬ್ರುವರಿ ೧೯೮೬ ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ೧೯೪೫ ರಿಂದ ೧೯೪೯ ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಮೃತರ ಆತ್ಮಶಾಂತಿಗಾಗಿ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರೆಲ್ಲರೂ ಒಂದು ನಿಮಿಷ ಮೌನವನ್ನು ಆಚರಿಸಿದರು)

ವಿತ್ತೀಯ ಕಾರ್ಯಕಲಾಪಗಳು

೧೯೮೬–೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ— ಬೇ.ಸಂ, ೩೪, ೩೫, ೪೪, ೪೫, ೪೬.

(ಕಾರ್ಮಿಕ ಮಂತ್ರಿಯವರಿಂದ ಉತ್ತರ)

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿ).—ಮಾನ್ಯ ಸಭಾಧ್ಯಕ್ಷರೇ, ಲೋಕೋಪಯೋಗಿ ಹಾಗೂ ನೀರಾವರಿ ಲಚ್ಚುಟ್ಟು ಅಭಿವೃದ್ಧಿ ಪ್ರದೇಶದ ಬಗ್ಗೆ ಮೊನ್ನೆ ಎಷ್ಟು ಚರ್ಚೆ ನಡೆಯಿತು, ಆ ಚರ್ಚೆಯಲ್ಲಿ ಕೇವಲ ೫–೬ ಜನ ಸದಸ್ಯರು ಮಾತನಾಡಿದರು. ಅವರು ಅತ್ಯಂತ ಪ್ರಾಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಚರ್ಚೆ ಅತ್ಯಂತ ಮೌಲ್ಯಯುತವಾದ ಚರ್ಚೆಯೆಂದು ನಾನು ಭಾವಿಸಿಕೊಳ್ಳುತ್ತೇನೆ. ಕಾರಣ ಇಷ್ಟೆ. ಮಾನ್ಯ ವೀರಪ್ಪ ಮೊಯಿಲಿಯವರು ಒಂದೂವರೆ ಗಂಟೆಗಳ ಕಾಲ, ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದರ ಮುಖಾಂತರ ರಾಜ್ಯದ ನೀರಾವರಿ ಸಮಸ್ಯೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ತೀವ್ರ ಪ್ರಯತ್ನ ಮಾಡಿದ್ದಾರೆ. ಆದರೆ ಜೊತೆಗೆ ನಮ್ಮ ನೀರಿನ ಹಕ್ಕನ್ನು ಯಾವರೀತಿ ಕಾಪಾಡಿಕೊಳ್ಳಬೇಕು, ಎಷ್ಟರಮಟ್ಟಿಗೆ ಎಚ್ಚರಿಕೆಯನ್ನು ವಹಿಸಬೇಕು ಎಂಬುದರ ಬಗ್ಗೆಯೂ ಅವರು ಸರ್ಕಾರಕ್ಕೆ ಕಾಣಿಕ್ಕಾವಾದ ಕೆಲವು ಮಾತುಗಳನ್ನು ಹೇಳಿದಾರೆ. ಆದೇರೀತಿ ಮತ್ತೊಬ್ಬ ಹಿರಿಯ ಸದಸ್ಯರು, ಮಾಜಿ ಮಂತ್ರಿಗಳೂ ಆದ ಬಸವಲಿಂಗಪ್ಪನವರು ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯ ಬಗ್ಗೆ ಹೆಚ್ಚು ಕಟು ಶಬ್ದಗಳಿಂದ ಟೀಕೆ ಮಾಡಿದ್ದಾರೆ. ಎಂದರೆ ಅವರು ಉಪಯೋಗಿಸಿದ ಎಲ್ಲಾ ಮಾತಿನ ಸಾರಾಂಶ, ಈ ಇಲಾಖೆಯಲ್ಲಿ ತೊಡಗಿಸತಕ್ಕ ಹಣ, ಒಂದು ನೂರು ರೂಪಾಯಿಯಲ್ಲಿ, ಇರವತ್ತು ರೂಪಾಯಿಗಳು ಪೋಲಾಗುತ್ತಿದೆ.